ರೂಪಿಸಲು ಸಹಾಯ ಮಾಡುತ್ತದೆ. ಮನೆಗೆ ಹೋದಮೇಲೆ ಅದನ್ನು ಬರೆದಿಡುತ್ತೇನೆ. ಹದಿಹರೆಯದಲ್ಲಿದ್ದಾಗ ಸುಮಾರು ಸಲ ರಾತ್ರಿ ಹೊತ್ತು ಕೂತು ಬರೆದಿದ್ದೇನೆ. ಅದು ಮೌನ, ಪ್ರಶಾಂತವಾದ ಹೊತ್ತು. ರಾತ್ರಿ ಬರೆಯುವುದು ಲೇಖಕನ ಏಕಾಂತವನ್ನು ಹೆಚ್ಚಿಸುತ್ತದೆ. ಈಗ ಬೆಳಗ್ಗೆ ಆರಂಭಿಸಿ ಮಧ್ಯಾಹ್ನದವರೆಗೆ ಬರೆಯುತ್ತೇನೆ. ರಾತ್ರಿ ಇಳಿಯುತ್ತಿದ್ದಂತೆ ಪುಟ ಮುಗಿಸಲು ಖುಷಿಯಾಗುತ್ತದೆ.

◆ **ಕವಿತೆ ಬರೆಯಲು ಸ್ಫೂರ್ತಿ ಏನು ಅಥವಾ ಆರಂಭ ಬಿಂದು ಯಾವುದು? ಒಂದು ಉದಾಹರಣೆ ಕೊಡುವಿರಾ?**

ಪ್ರತಿ ಕವಿತೆಯೂ ಭಿನ್ನ. ಮೊದಲ ಸಾಲು ವರ. ದೇವರೋ ಅಥವಾ ರಹಸ್ಯಮಯವಾದ ಸ್ಫೂರ್ತಿದೇವತೆಯೋ ಯಾರಿಂದ ಬರುತ್ತದೋ ಗೊತ್ತಿಲ್ಲ. 'Sun Stone' ಕವಿತೆಯ ಉದಾಹರಣೆಯನ್ನೇ ನೋಡೋಣ: ಮೊದಲ ಮೂವತ್ತು ಸಾಲುಗಳನ್ನು ಯಾರೋ ಹೇಳಿ ಬರೆಸುತ್ತಿದ್ದಾರೆ ಎನ್ನುವಂತೆ ಬರೆದೆ. ಅವು ಓತಪ್ರೋತವಾಗಿ ಹರಿದುಬಂದಿದ್ದು ನೋಡಿ ಅಚ್ಚರಿಯಾಯಿತು. ನನ್ನೊಳಗಿನಿಂದಲೇ ಹರಿದು ಬರುತ್ತಿದ್ದ ಆ ಪ್ರವಾಹ ಇದ್ದಕ್ಕಿದ್ದಂತೆ ನಿಂತಿತು. ಬರೆದದ್ದನ್ನು ಓದಿದೆ. ಒಂದಕ್ಷರ ಕೂಡ ಬದಲಿಸುವಂತಿರಲಿಲ್ಲ. ಅದು ಆರಂಭ ಮಾತ್ರ. ಆ ಸಾಲುಗಳು ಎಲ್ಲಿದ್ದವೋ ಎಲ್ಲಿಂದ ಬಂದವೋ ಗೊತ್ತಿಲ್ಲ. ಕೆಲವು ದಿನಗಳ ಅನಂತರ ಮತ್ತೆ ಬರೆಯಲು ಯತ್ನಿಸಿದೆ. ಮೂವತ್ತೋ ನಲವತ್ತೋ ಸಾಲುಗಳನ್ನು ಬರೆದೆ. ನಿಲ್ಲಿಸಿದೆ. ಮತ್ತೆ ಕೆಲವು ದಿನಗಳ ಅನಂತರ ಸ್ವಲ್ಪ ಸ್ವಲ್ಪವೇ ಬರೆದೆ. ಆ ವಸ್ತುವಿನ ವಿಷಯ ಎತ್ತ ಸಾಗುತ್ತಿದೆ ಎಂದು ಕಂಡುಕೊಂಡೆ.

◆ **ದೀರ್ಘ ಕವನಗಳನ್ನು ಬರೆಯುವಾಗ ನಿಮ್ಮನ್ನು ಪುರಾತನ ಸಂಪ್ರದಾಯದ ಭಾಗವಾಗಿ ಕಾಣುವಿರಾ?**

ಆಧುನಿಕ ಕಾಲದ ದೀರ್ಘ ಕವನಗಳು ಹಿಂದಿನ ಕಾಲಕ್ಕಿಂತ ಭಿನ್ನ. ಮಹಾಕಾವ್ಯಗಳಲ್ಲಿನ ಹೂರಣ ಬೇರೆ. ಇದಕ್ಕೆ ಹಲವಾರು ಕಾರಣಗಳಿವೆ. ಮೊದಲನೆಯದಾಗಿ ನಮ್ಮ ದೀರ್ಘ ಕವನಗಳು ಹಿಂದಿನವರಷ್ಟು ದೀರ್ಘವಲ್ಲ. ಎರಡನೆಯದು ದೀರ್ಘ ಕವನದ ಬೆಳವಣಿಗೆ ಮತ್ತು ಸಣ್ಣ ಕವನಗಳ ತೀವ್ರತೆ ಒಟ್ಟಿಗೆ ಇರುತ್ತದೆ. ಇವೆರಡನ್ನೂ ಸಂಭಾಳಿಸುವುದು ಕಷ್ಟ. ಇದೇ ಹೊಸ ರೀತಿ. ಅದಕ್ಕೆ ಎಲಿಯೆಟ್ ಬಗ್ಗೆ ನನಗೆ ಮೆಚ್ಚುಗೆ. ಅವನ ದೀರ್ಘ ಕವನಗಳಲ್ಲಿ ಕಿರು ಕವನಗಳಷ್ಟೇ ಸಾಂದ್ರತೆ ಮತ್ತು ತೀವ್ರತೆಯಿದೆ.

◆ **ಬರವಣಿಗೆಯ ಪ್ರಕ್ರಿಯೆ ಖುಷಿಕೊಡುವಂತದ್ದೇ ಇಲ್ಲವೇ ಹಿಂಸೆ ಅನ್ನಿಸುತ್ತದೆಯೇ?**

ಬರವಣಿಗೆ ಎನ್ನುವುದು ನೋವು ತುಂಬಿದ ಪ್ರಕ್ರಿಯೆ. ಅದು ಬಹಳ ಶ್ರಮ ಹಾಗೂ ನಿದ್ದೆಗೆಟ್ಟ ರಾತ್ರಿಗಳನ್ನು ಬೇಡುತ್ತದೆ. ಜೊತೆಗೆ, ರೈಟರ್ಸ್ ಬ್ಲಾಕ್, ವಿಫಲತೆಯ ಭಾವ ಕಾಡುತ್ತಲೇ ಇರುತ್ತದೆ. ನಾವು ಬರೆಯುವುದು ನಾವು ಬಯಸಿದ್ದನ್ನಲ್ಲ. ಎಲ್ಲಕ್ಕಿಂತ ಕೆಟ್ಟದ್ದು ನೀರಿನ ಹರಿವನ್ನು ಹರಿಬಿಡುವ ಬಿರಡೆಗಾಗಿ ಗಂಟೆಗಟ್ಟಲೆ, ದಿನಗಟ್ಟಲೆ ಇಲ್ಲವೆ ತಿಂಗಳುಗಟ್ಟಲೆ ಹುಡುಕಾಡುವಂತಹ ನೋವಿನ ಗಳಿಗೆಗಳು ಬರವಣಿಗೆಯಲ್ಲಿರುತ್ತವೆ. ಆಗ ಬರವಣಿಗೆ ಶಾಪ ಅನ್ನಿಸುತ್ತದೆ. ಒಮ್ಮೆ ಆ ಮೊದಲ ಸಾಲು ಕೈಹಿಡಿದರೆ ಎಲ್ಲವೂ ಬದಲಾಗಿಬಿಡುತ್ತದೆ. ಅಂತಿಮ ಫಲಿತಾಂಶ ಏನೇ ಆದರೂ ಬರವಣಿಗೆ ರೋಮಾಂಚಕಾರಿ ಅದ್ಭುತ ಅನುಭವವಾಗುತ್ತದೆ. ಆಗ ಬರವಣಿಗೆ ವರವಿದ್ದಂತೆ!